₹ 5
ಸಂಪುಟ: 4 ಸಂಚಿಕೆ: 7 ಪುಟಗಳು: 10+4
11.01.2019 ಶುಕ್ರವಾರ
ಬೆಂಗಳೂರು । ಹುಬ್ಬಳ್ಳಿ । ಮಂಗಳೂರು
ದಾವಣಗೆರೆ । ಕಲಬುರಗಿ । ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ದಾರಿದೀಪೋಕ್ತಿ

ಜೀವನದಲ್ಲಿ ತೊಂದರೆ, ಆತಂಕಗಳು ಬರದಿದ್ದರೆ ನಮ್ಮ ಸಾಮರ್ಥ್ಯವೇನೆಂಬುದು ಗೊತ್ತೇ ಆಗುವುದಿಲ್ಲ. ನಮ್ಮ ತಾಕತ್ತೇನೆಂಬುದನ್ನು ಪರೀಕ್ಷಿಸಿಕೊಳ್ಳಲು ಆಗಾಗ ಸಂಕಟಗಳು ಬರಬೇಕು. ಇಲ್ಲದಿದ್ದರೆ ಜೀವನದಲ್ಲಿ ನಮಗೆ ಕೆಲವು ಅದ್ಭುತ ಅನುಭವಗಳೇ ಆಗುವುದಿಲ್ಲ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬೆಂಗಳೂರಿನ ಬಸವನಗುಡಿಯ
ಲಂಬೋದರನಿಗೆ ಎಲ್ಲರೂ ಜೈ ಅನ್ನಿ

ಸಿನಿಮಾನೆ

ಮುಖ್ಯಮಂತ್ರಿಗಳೇ ಇಲ್ನೋಡಿ, ಮಂಗನ ಕಾಯಿಲೆಗೆ ಜನ ಊರು ತೊರೆಯುತ್ತಿದ್ದಾರೆ!

ಗಜಾನನ ಶರ್ಮಾ

ಕಳೆದ ಇಪ್ಪತ್ತು ದಿನಗಳಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಭಾರಂಗಿ ಹೋಬಳಿಯ ಅರಳಗೋಡು ಮತ್ತು ಸುತ್ತಮುತ್ತಲ ಗ್ರಾಮಗಳನ್ನು ಕಾಡುತ್ತಿರುವ ಮಂಗನ ಕಾಯಿಲೆಯೆಂಬ ಮಹಾಮಾರಿ ಹಿನ್ನೀರಿನ ಹಳ್ಳಿಗರ ಬದುಕನ್ನೇ ಹೊಸಕಿಹಾಕುತ್ತಿದೆ. ಮಲೆನಾಡಿಗೆ ಮುಪ್ಪು ಬಡಿಯುತ್ತಿದೆ ಎನ್ನಿಸುತ್ತಿದೆ. ಊರಿನಲ್ಲೇ ಇದ್ದು ಸಾಯುತ್ತೇವೆ ಎನ್ನುತ್ತಿದ್ದವರೂ ಊರು ಬಿಡುತ್ತಿದ್ದಾರೆ!

ಕಾರಣ, ನಮ್ಮೂರನ್ನು ನಮ್ಮವರನ್ನು ತುಂಬಿರುವ ಜೀವಭಯ. ಅಂತಕನ ನೆರೆಯೊರಲ್ಲಿ ನಿಂತವರಂತೆ ನಿತ್ಯ ಆತಂಕದ ಅಗ್ನಿಕುಂಡದಲ್ಲಿ ಬೇಯುತ್ತಿರುವ ಅವರ ಮನಃಸ್ಥಿತಿ ಮತ್ತು ಪರಿಸ್ಥಿತಿಯನ್ನು ಕಂಡಾಗ ಮನಸ್ಸು ಮರುಗುತ್ತದೆ. ಒಂದು ಸಣ್ಣ ತಲೆನೋವು, ತುಸು ಜ್ವರ ಶುರುವಾದರೂ ತನ್ನ ಅಂತ್ಯ ಸಮೀಪಿಸುತ್ತಿದೆ ಎನ್ನುವಷ್ಟು ಭಯಭೀತರಾಗುತ್ತಿದ್ದಾರೆ ಅಲ್ಲಿಯ ಜನ. ಹಿನ್ನೀರಿನ ನಮ್ಮ ಹಳ್ಳಿಗಳಲ್ಲಿದ್ದ ಆರ್ದ್ರತೆ, ಜೀವಂತಿಕೆ ಮತ್ತು ಕಾಡಿನ ಕುರಿತು ಇದ್ದ ಪ್ರೀತಿ ಎಲ್ಲವನ್ನೂ ಈ ಮಂಗನ ಕಾಯಿಲೆಯೆಂಬ ಮಹಾಮಾರಿ ಹೊಸಕಿ ಹಾಕಿದೆ. ನಮ್ಮ ಗ್ರಾಮದ ಪಕ್ಕದ ಅರಳಗೋಡಿನಲ್ಲಿ ಈಗಾಗಲೇ ಆರು ಮಂದಿ ಸತ್ತಿದ್ದಾರೆ. ಅದರಲ್ಲಿ ಎರಡನೇ ಪಿಯುಸಿ ಓದುತ್ತಿದ್ದ ಶ್ವೇತಾಜೈನ್‌ರಂತಹ ಯುವ ಜೀವವೂ ಇದೆ. ಅವರಪ್ಪನ ಜೀವ ಸಾವು ಬದುಕಿನ ನಡುವೆ ತೂಗುಯ್ಯಾಲೆಯಾಡುತ್ತಿದೆ. ಈಗಂತೂ ಇಪ್ಪತ್ತಕ್ಕೂ ಹೆಚ್ಚು ಮಂದಿ ಮಣಿಪಾಲಕ್ಕೆ ಸೇರಿದ್ದಾರೆ. ಹತ್ತು ಹನ್ನೆರಡು ಮಂದಿ ಕೋಟೇಶ್ವರ ಸೇರಿದ್ದಾರೆ. ಇನ್ನು ಸಾಗರ, ಶಿವಮೊಗ್ಗದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ನಲವತ್ತೈವತ್ತು ಮಂದಿ.

ಜವರಾಯ ಬಂದರೆ ಬರಿಗೈಲಿ ಬರಲಿಲ್ಲ ಎಂಬಂತೆ ಆತನ ಕೊಡಲಿ ಈಗ ಆರುವರ್ಷದ ಮಗುವಿನಿಂದ ಹಿಡಿದು ಎಪ್ಪತ್ತರ ವೃದ್ಧರವರೆಗೆ, ಜಾತಿ, ಮತ, ಧರ್ಮ, ಲಿಂಗ, ವರ್ಗ ವಯೋಬೇಧವಿಲ್ಲದೆ, ಅನೇಕರ ಮೇಲೆ ಬೀಸಲ್ಪಡುತ್ತಿದೆ.

ಎರಡೆರಡು ಮುಳುಗಡೆ, ಸರಕಾರದ ಅಸ್ಥಿರ ಅರಣ್ಯ ಕಾರ್ಯನೀತಿ, ಕಸ್ತೂರಿ ರಂಗನ್, ಬಯೋಡೈವರ್ಸಿಟಿ ಹಾಟ್ ಸ್ಪಾಟನಂತಹ ವರದಿಗಳು, ಯೋಜನಾ ಪ್ರದೇಶದ ಹುಚ್ಚಾಟಗಳು, ಅರಣ್ಯ ಅಧಿಕಾರಿಗಳ ಕಿರುಕುಳಗಳ ನಡುವೆ ಹಿನ್ನೀರಿನ ಹತ್ತು ಹಲವು ತಾಪತ್ರಯಗಳಿಗೆ ಸಿಕ್ಕು ನರಳುತ್ತಿದ್ದ ಜನರನ್ನು ಹೊರದೂಡುತ್ತಿದೆ. ಅವರೀಗ ಕಾಡಿನೊಳಗೆ ಕಾಲಿಡಲೂ ಭಯಪಡುತ್ತಿದ್ದಾರೆ. ತೋಟಕ್ಕೆ, ಗದ್ದೆಗೆ ಹೋಗಲೂ ಧೈರ್ಯವಿಲ್ಲದೆ ನಡುಗುತ್ತಿದ್ದಾರೆ.

ಈ ವರ್ಷ ಮೊದಲು ಗೋಚರಿಸಿದ್ದು ಲಿಂಗನಮಕ್ಕಿ ಹಿನ್ನೀರಿನ ಪ್ರದೇಶವಾದ ಅರಳಗೋಡು ಗ್ರಾಮದಲ್ಲಿ ಮತ್ತು ತಲಕಳಲೆ ಜಲಾಶಯದ ಹಿನ್ನೀರು ಪ್ರದೇಶವಾದ ಬಿದರೂರು, ಜಡ್ಡಿನಮನೆ ಮುಂತಾದ ಗ್ರಾಮಗಳಲ್ಲಿ. ಅಲ್ಲಲ್ಲಿ ಮಂಗಗಳು ಸಾಯುತ್ತವೆ. ಮಂಗಗಳ ಮೈಮೇಲಿರುವ ಉಣುಗು (ಉಣ್ಣೆ ಅಥವಾ ticks) ಪ್ರಸರಣಗೊಂಡು ಮನುಷ್ಯರನ್ನು ಸೇರುತ್ತವೆ. ಅವು ಕಚ್ಚಿದಾಗ ಬರುವ ವೈರಲ್ ಡಿಸೀಸ್ ಈ ಕೆಎಫ್‌ಡ್ (ಕ್ಯಾಸನೂರು ಫಾರೆಸ್ಟ್ ಡಿಸೀಸ್) 1957 ರ ಹೊತ್ತಿಗೆ ಮೊಟ್ಟಮೊದಲಿಗೆ ಸೊರಬ ತಾಲೂಕಿನ ಕ್ಯಾಸನೂರು ಅರಣ್ಯ ಪ್ರದೇಶದಲ್ಲಿ ಕಾಣಿಸಿಕೊಂಡ ಈ ಕಾಯಿಲೆ ಅಂದಿನಿಂದಲೂ ಒಂದಿಲ್ಲೊಂದು ಪ್ರದೇಶವನ್ನು ಕಾಡುತ್ತಲೇ ಬಂದಿದೆ.

ಕೆಎಫ್‌ಡಿಯನ್ನು ಕನಫರ್ಮ್ ಮಾಡಿಕೊಳ್ಳಲು ರಕ್ತದಲ್ಲಿ ಅದರ ಇರುವನ್ನು ಪತ್ತೆಮಾಡಬೇಕಾಗುತ್ತದೆ. ಸಧ್ಯಕ್ಕೆ ಅದನ್ನು ಪರೀಕ್ಷೆ ಮಾಡಲು ಮಹಾರಾಷ್ಟ್ರದ ಪೂನಾ ನಗರಕ್ಕೇ ಕಳುಹಿಸಲಾಗುತ್ತಿದೆ. ಶಿವಮೊಗ್ಗದಲ್ಲಿ ಅದಕ್ಕೆಂದು ತೆರೆದ ಲ್ಯಾಬೋರೇಟರಿ ಗುಜರಿ ಸೇರಿದೆ.

ಮಂಗ ಸತ್ತರೆ ವೈರಸ್ ಮತ್ತು ಉಣುಗು ಹರಡದಂತೆ ಅದನ್ನು ಸುಡಬೇಕು. ಅದು ಆರೋಗ್ಯ ಮತ್ತು ಅರಣ್ಯ ಇಲಾಖೆಗಳ ಜವಾಬ್ದಾರಿ. ಆದರೆ ಅವು ಮಂಗ ಸತ್ತಿದೆಯೆಂದು ಹಳ್ಳಿಗರು ಕರೆ ಮಾಡಿದರೆ ಅದನ್ನು ಸುಟ್ಟುಬಿಡಿ ಎಂದು ಹಳ್ಳಿಗರಿಗೇ ಹೇಳುತ್ತಾರೆಯೇ ಹೊರತು ತಾವು ಬಂದು ಸೂತ್ತ ಕ್ರಮ ಕೈಗೊಳ್ಳುವುದಿಲ್ಲ. ಸತ್ತ ಮಂಗನನ್ನು ತೋರಿಸಿದರೆ ಐದು ನೂರು ರುಪಾಯಿ ಬಹುಮಾನವಂತೆ! ಅದರ ಆಸೆಗೆ ಪಾಪ, ಹಳ್ಳಿಗರು ಅರಣ್ಯಕ್ಕೆ ಹೋಗಿ ಸಾಯಲಿ ಎಂಬ ಧೋರಣೆಯೇ? ಅದನ್ನು ಶೋಧಿಸುವುದು ಇಲಾಖೆಗಳ ಜವಾಬ್ದಾರಿಯಲ್ಲವೇ?

ಮೊದಲೆಲ್ಲ ಹಳ್ಳಿಗಳ ಜನವಸತಿ ಇದ್ದ ಸ್ಥಳದ ಸಮೀಪದ ಅರಣ್ಯವನ್ನು ಬೇಸಿಗೆ ದಿನಗಳಲ್ಲಿ ಒಂದಷ್ಟು ಸುಡುತ್ತಿದ್ದರು. ಅದರಿಂದ ಗ್ರಾಮಗಳಿಗೆ ಇಂತಹ ಕ್ರಿಮಿಕೀಟಗಳ ಬಾಧೆ ಕಡಿಮೆಯಾಗುತ್ತಿತ್ತು. ಈಗ ಬೆಂಕಿ ಹಚ್ಚುವುದನ್ನು ತಡೆಯಲಾಗುತ್ತಿದೆ. ಅರಣ್ಯ ನಾಶ ತಡೆಯುವ ಉದ್ದೇಶದ ಆ ಕ್ರಮ ಸರಿ. ಆದರೆ, ಹಳ್ಳಿಗರಿಗೆ ಉಂಟಾಗುವ ತೊಂದರೆ ತಪ್ಪಿಸಲು ಏನು ಕ್ರಮ?

ಈ ಹಳ್ಳಿಗಳು ಎರಡೆರಡು ಮುಳುಗಡೆ ಕಂಡಿವೆ. ಹಿರೇಭಾಸ್ಕರ ಮತ್ತು ಲಿಂಗನಮಕ್ಕಿ. ಶರಾವತಿ ಯೋಜನೆ 1948 ರಿಂದ ಇದುವರೆಗೂ ರಾಜ್ಯಕ್ಕೆ ಕೊಟ್ಟ ವಿದ್ಯುತ್ ಲೆಕ್ಕ ಹಾಕಿದರೆ ಸರಿ ಸುಮಾರು ಮೂವತ್ತು ಸಾವಿರ ಕೋಟಿ ಯೂನಿಟ್ಟುಗಳು.

→ 5

ಮೃತ ವಿದ್ಯಾರ್ಥಿನಿ ಶ್ವೇತಾ ಜೈನ್

ಇದು ಓದುಗರ ಒಡಲ ಸಂಕಟ!

ನಮ್ಮ ಸಂತೋಷವನ್ನು ಇತರರು ಹುಡುಕಿಕೊಡಲು ಸಾಧ್ಯವೇ ಇಲ್ಲ

6 ಗುರುಮನ
ಗೌರ್ ಗೋಪಾಲ್

ಲಾಲು ಜಾಮೀನು ಅರ್ಜಿ ತಿರಸ್ಕೃತ

ರಾಂಚಿ: ಬಹು ಕೋಟಿ ಮೇವು ಹಗರಣದ ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ಆರ್‌ಜೆಡಿ ಮುಖಂಡ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಜಾರ್ಖಂಡ್ ಹೈ ಕೋರ್ಟ್ ಗುರುವಾರ ತಿರಸ್ಕರಿಸಿದೆ.

ಶೇ.10 ಮೀಸಲು ಪ್ರಶ್ನಿಸಿ ಅರ್ಜಿ

ದೆಹಲಿ: ಮೇಲ್ವರ್ಗದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ.10ರಷ್ಟು ಮೀಸಲಾತಿ ಕಲ್ಪಿಸಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಯೂತ್ ಫಾರ್ ಈಕ್ವಾಲಿಟಿ ಸ್ವಯಂಸೇವಾ ಸಂಸ್ಥೆ ಮತ್ತು ಕೌಶಲ್ ಕಾಂತ್ ಮಿಶ್ರಾ ಎಂಬುವರು ಈ ಮಸೂದೆಯನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಅರ್ಜಿ ಸಲ್ಲಿಸಿದ್ದಾರೆ.

ವಕ್ರತುಂಡೋಕ್ತಿ

ಯಾವತ್ತೂ ಮೇಕ್ ಅಪ್ ಮಾಡಿಕೊಳ್ಳುವ ಹೆಂಗಸರು ಒಳ್ಳೆಯ ಭಾವನೆಯವರು. ಅವರಿಗೆ ತಮ್ಮ ನಿಜ ಸ್ವರೂಪವನ್ನು ಬೇರೆಯವರಿಗೆ ತೋರಿಸಿ ಹೆದರಿಸಲು ಇಷ್ಟವಿರುವುದಿಲ್ಲ.

ಹೌ ಈಸ್ ಮೈ ಬೆಸ್ಟ್‌ಫ್ರೆಂಡ್ ದೇವೇಗೌಡ ಜೀ?

ಗೌಡರ ಆರೋಗ್ಯ ವಿಚಾರಿಸಿದ ಪ್ರಧಾನಿ

ಬೀದರ್: ಪ್ರಧಾನಿ ನರೇಂದ್ರ ಮೋದಿ ದೆಹಲಿಯಿಂದ ಸೊಲ್ಲಾಪುರಕ್ಕೆ ತೆರಳುವ ಸಂದರ್ಭದಲ್ಲಿ ಬೀದರ್‌ನ ವಾಯುಪಡೆ ವಿಮಾನ ನಿಲ್ದಾಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬಂಡೆಪ್ಪ ಕಾಶೆಂಪೂರ ಮೋದಿ ಅವರನ್ನು ಸ್ವಾಗತಿಸಿದರು.

ಕಾಶೆಂಪೂರ ಅವರ ಜತೆ ಕೆಲ ಸಮಯ ಮಾತನಾಡಿದ ಪ್ರಧಾನಿ, ಮಾಜಿ ಪಿಎಂ ದೇವೇಗೌಡ ಹಾಗೂ ಸಿಎಂ ಕುಮಾರ ಸ್ವಾಮಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿದರು. ಬೀದರ್ ವಾಯು ನೆಲೆಯಲ್ಲಿ ಬುಧವಾರ ಬೆಳಗ್ಗೆ 9.40ರ ಸುಮಾರಿಗೆ ಬಂದಿಳಿದ ಪ್ರಧಾನಿ ಮೋದಿ ಅವರಿಗೆ ಹೂ ನೀಡಿ, ಕೈ ಕುಲುಕಿದ ಸಹಕಾರ ಸಚಿವ ಬಂಡೆಪ್ಪ ಕಾಶೆಂಪೂರ, 'ಐ ಆ್ಯಮ್ ಫ್ರಮ್ ಎಚ್.ಡಿ. ದೇವೇಗೌಡ ಪಾರ್ಟಿ ಮಿನಿಸ್ಟರ್' ಎಂದು ಪರಿಚಯಿಸಿಕೊಂಡರು.

ಇದಕ್ಕೆ ಪ್ರತಿಯಾಗಿ ಪ್ರಧಾನಿ ನರೇಂದ್ರ ಮೋದಿ, 'ಹೌ ಈಸ್ ಮೈ ಬೆಸ್ಟ್ ಫ್ರೆಂಡ್, ಆ್ಯಂಡ್ ಹೌ ಈಸ್ ಹಿಸ್ ಹೆಲ್ತ್,' ಎಂದು ಮೋದಿ ಅವರು ನಗುಮುಖದಿಂದಲೇ ಯೋಗಕ್ಷೇಮ ವಿಚಾರಿಸಿದರು. ಅದು ಅವರ ಸರಳತನವನ್ನು ಬಿಂಬಿಸುತ್ತದೆ ಎಂದು ಕಾಶೆಂಪೂರ ತಿಳಿಸಿದರು. ರಾಜ್ಯ ಸರಕಾರದ ಪರವಾಗಿ ಸಚಿವರಾದ ಬಂಡೆಪ್ಪ ಕಾಶೆಂಪೂರ, ರಾಜಶೇಖರ ಪಾಟೀಲ್, ರಹೀಂ ಖಾನ್ ಪ್ರಧಾನಿ ಅವರನ್ನು ಬರಮಾಡಿಕೊಂಡರು.

ಸಿಬಿಐನಿಂದ ಅಲೋಕ್ ವರ್ಮಾ ಔಟ್

ಉನ್ನತಾಧಿಕಾರ ಸಮಿತಿ ವಜಾಗೊಳಿಸುವ ನಿರ್ಧಾರ ತೆಗೆದುಕೊಂಡಿದೆ

ದೆಹಲಿ: ಕರ್ತವ್ಯಕ್ಕೆ ಮರಳಿದ 48 ಗಂಟೆಗಳಲ್ಲಿ ಸಿಬಿಐ ನಿರ್ದೇಶಕ ಸ್ಥಾನದಿಂದ ಅಲೋಕ್ ವರ್ಮಾ ಅವರನ್ನು ವಜಾಗೊಳಿಸಲಾಗಿದೆ. ಸಿಬಿಐ ಕಚೇರಿಗೆ ಮರಳಿದ್ದ ಅವರು 24 ಗಂಟೆಗಳಲ್ಲಿ ಹತ್ತಕ್ಕೂ ಹೆಚ್ಚು ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದರು.

ಪ್ರಧಾನಿ ನರೇಂದ್ರ ಮೋದಿ, ಸುಪ್ರಿಂ ಕೋರ್ಟ್ ನ್ಯಾಯಮೂರ್ತಿ ಎ.ಕೆ. ಸಿಕ್ರಿ ಲೋಕಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ಉನ್ನತಾಧಿಕಾರ ಸಮಿತಿ ಅಲೋಕ್ ವರ್ಮಾ ಅವರನ್ನು ವಜಾಗೊಳಿಸುವ ನಿರ್ಧಾರ ತೆಗೆದುಕೊಂಡಿದೆ.

ವರ್ಮಾ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

ಸಿಬಿಐ ಹಿರಿಯ ಅಧಿಕಾರಿಗಳ ನಡುವಿನ ಕಿತ್ತಾಟದ ಹಿನ್ನೆಲೆಯಲ್ಲಿ ಕಳೆದ ವರ್ಷ ಅ. 23ರ ಮಧ್ಯರಾತ್ರಿ ಅಲೋಕ್ ವರ್ಮಾ ಅವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿತ್ತು. ಕೇಂದ್ರ ಸರಕಾರದ ಈ ಆದೇಶವನ್ನು ಪ್ರಶ್ನಿಸಿ ವರ್ಮಾ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಾಲಯ ಇವರಿಗೆ ಕರ್ತವ್ಯಕ್ಕೆ ಮರಳಲು ಆದೇಶ ಹೊರಡಸಿತ್ತು. ಅಲೋಕ್ ವರ್ಮಾ ಬುಧವಾರ ಕರ್ತವ್ಯಕ್ಕೆ ಹಾಜರಾಗಿದ್ದರು.

ಕೇಂದ್ರ ಸರಕಾರವನ್ನು ಎದುರು ಹಾಕಿಕೊಂಡು ಸುಪ್ರೀಂ ಕೋರ್ಟ್ ನೆರವಿನಿಂದ ಸಿಬಿಐ ನಿರ್ದೇಶಕ ಸ್ಥಾನಕ್ಕೆ ಕಂಬ್ಯಾಕ್ ಮಾಡಿದ್ದ ಅಲೋಕ್ ವರ್ಮಾ ಅವರು ಕ್ಷಣವೂ ವ್ಯರ್ಥ ಮಾಡದೆ ಕಾರ್ಯಾಚರಣೆಗಿಳಿದಿದ್ದರು. ತಮ್ಮ 10 ಆಪ್ತರನ್ನು ವರ್ಗಾವಣೆ ಮಾಡಲಾಗಿದ್ದ ಕ್ರಮವನ್ನು ನಿನ್ನೆ ಅವರು ರದ್ದುಗೊಳಿಸಿ ಅವರೆಲ್ಲರನ್ನೂ ಮೂಲ ಸ್ಥಾನಕ್ಕೆ ಕರೆತಂದಿದ್ದರು. ಅಲೋಕ್ ವರ್ಮಾ ಇವತ್ತು ಐವರು ಸಿಬಿಐ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರು. ಸಿಬಿಐ ಡಿಐಜಿಗಳಾದ ಎಂ.ಕೆ. ಸಿನ್ಹಾ ಮತ್ತು ತರುಣ್ ಗಾಭ, ಜಂಟಿ ನಿರ್ದೇಶಕರಾದ ವಿ. ಮುರುಗೇಸನ್ ಮತ್ತು ಅಜಯ್ ಭಟ್ನಾಗರ್, ಹೆಚ್ಚುವರಿ ನಿರ್ದೇಶಕ ಎ.ಕೆ. ಶರ್ಮಾ ಅವರು ಇವತ್ತು ವರ್ಗಾವಣೆಯಾದ ಅಧಿಕಾರಿಗಳಾಗಿದ್ದಾರೆ.

ಸಿಬಿಐ ವಿಶೇಷ ನಿರ್ದೇಶಕ ರಾಕೇಶ್ ಅಸ್ಥಾನ ವಿರುದ್ಧದ ಪ್ರಕರಣದಲ್ಲಿ ತನಿಖೆ ನಡೆಸುತ್ತಿದ್ದ ಸಿಬಿಐ ತಂಡಕ್ಕೆ ತರುಣ್ ಗಭಾ ಮತ್ತು ವಿ.ಮುರುಗೇಸನ್ ಅವರನ್ನು ಹಾಕಿದ್ದರು. ಈ ಪ್ರಕರಣದಲ್ಲಿ ತನಿಖೆಯ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಮುರುಗೇಸನ್ ಅವರಿಗೆ ವಹಿಸಿಕೊಟ್ಟಿದ್ದರು.

ರಾಕೇಶ್ ಅಸ್ಥಾನ ವಿರುದ್ಧದ ಪ್ರಕರಣದ ತನಿಖೆಯಲ್ಲಿ ಎಲ್ಲಿಯೂ ಲೋಪ ಉಂಟಾಗಬಾರದೆಂದು ಅಲೋಕ್ ವರ್ಮಾ ಈ ನಿರ್ಧಾರ ಕೈಗೊಂಡಿದ್ದರೆನ್ನಲಾಗಿದೆ.

ಸಿಬಿಐಯೊಳಗೆ ಅಲೋಕ್ ವರ್ಮಾ ಮತ್ತು ರಾಕೇಶ್ ಅಸ್ಥಾನ ನಡುವಿನ ವೈಮನಸ್ಸು ಬೀದಿಗೆ ಬಂದ ಹಿನ್ನೆಲೆಯಲ್ಲಿ ಅವರಿಬ್ಬರನ್ನೂ ಕೇಂದ್ರ ಸರಕಾರ ಕಡ್ಡಾಯ ರಜೆ ಕೊಟ್ಟು ಕರ್ತವ್ಯದಿಂದ ದೂರ ಉಳಿಸಿತ್ತು.

ಡಿಕೆಶಿಗೆ ಮತ್ತೆ ಸಂಕಷ್ಟ?

ಬೆಂಗಳೂರು: ಪ್ರಭಾವಿ ಸಚಿವ ಹಾಗೂ ಕಾಂಗ್ರೆಸ್ ನಾಯಕ ಡಿ.ಕೆ.ಶಿವಕುಮಾರ್ ಅವರಿಗೆ ಮತ್ತೆ ಸಂಕಷ್ಟ ಎದುರಾಗಿದೆ. ಬೇನಾಮಿ ಆಸ್ತಿ ವಿಚಾರ ಕುರಿತಂತೆ ಡಿಕೆಶಿ ಅವರ ವಿಚಾರಣೆ ನಡೆಸಿರುವ ಆದಾಯ ತೆರಿಗೆ ಅಧಿಕಾರಿಗಳು ಇನ್ನೊಂದು ವಾರದಲ್ಲಿ ದೆಹಲಿಯಲ್ಲಿರುವ ಟ್ರಿಬ್ಯೂನಲ್‌ಗೆ ವರದಿ ಸಲ್ಲಿಸುವ ಸಾಧ್ಯತೆ ಇದೆ.

ಬೇನಾಮಿ ಆಸ್ತಿ ಕುರಿತಂತೆ ಐವರ ಹೇಳಿಕೆಯನ್ನು ಅಧಿಕಾರಿಗಳು ದಾಖಲು ಮಾಡಿಕೊಂಡಿದ್ದಾರೆ. ಚೆನ್ನೈ ಮೂಲದ ವ್ಯಕ್ತಿಯ ಹೆಸರಿನಲ್ಲಿದ್ದ ಆಸ್ತಿ ಬಗ್ಗೆಯೂ ತನಿಖೆ ಪೂರ್ಣಗೊಳಿಸಿದ್ದಾರೆಂದು ಮೂಲಗಳಿಂದ ತಿಳಿದು ಬಂದಿದೆ. ಅಂತಿಮವಾಗಿ ಡಿ.ಕೆ ಶಿವಕುಮಾರ್ ಮತ್ತು ಅವರ ತಾಯಿ ಗೌರಮ್ಮ ಅವರನ್ನು ಈಗಾಗಲೇ ವಿಚಾರಣೆಗೆ ಒಳಪಡಿಸಿದ್ದಾರೆ.

ಗವಿಸಿದ್ದೇಶ್ವರ ಜಾತ್ರೆಗೆ ಭರ್ಜರಿ ತಯಾರಿ

ಕಲಕೇರಿ ಸಂಗೀತ ವಿದ್ಯಾಲಯ ಕಲಾವಿದರಿಂದ ಚಾಲನೆ? | ದಾಸೋಹಕ್ಕೆ ಹರಿದುಬರುತ್ತಿದೆ ದವಸ-ಧಾನ್ಯ

ಬಸವರಾಜ ಕರ್ಕಿಹಳ್ಳಿ, ಕೊಪ್ಪಳ

ದಕ್ಷಿಣ ಭಾರತದ ಕುಂಭಮೇಳ ಎಂದೇ ಖ್ಯಾತಿ ಪಡೆದಿರುವ ನಾಡಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿರುವ ಕೊಪ್ಪಳ ಗವಿಸಿದ್ಧೇಶ್ವರ ಸ್ವಾಮಿಯ ಮಹಾರಥೋತ್ಸವ ಜ. 22ರಂದು ಜರುಗಲಿದ್ದು, ಶ್ರೀಮಠದಲ್ಲಿ ಭರ್ಜರಿ ತಯಾರಿ ನಡೆದಿದೆ.

ಪ್ರತಿ ಬಾರಿ ರಥೋತ್ಸವಕ್ಕೆ ಚಾಲನೆ ನೀಡಲು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹನೀಯರನ್ನು ಕರೆತರುವುದು ಸಂಪ್ರದಾಯ. ಅದರಂತೆ ಈ ವರ್ಷ ಯಾರಿಂದ ಚಾಲನೆ ನೀಡಿಸಲಾಗುತ್ತದೆ ಎಂಬ ಕುತೂಹಲ ಮೂಡಿದೆ. ಜಲತಜ್ಞ ಡಾ. ರಾಜೇಂದ್ರಸಿಂಗ್ ಸೇರಿದಂತೆ ದೇಶದ ವಿವಿಧೆಡೆ ಇರುವ ಮಹನೀಯರನ್ನು ಕರೆತರುವ ನಿಟ್ಟಿನಲ್ಲಿ ಮಾತುಕತೆ ನಡೆದಿತ್ತು. ಒಂದು ಹಂತದಲ್ಲಿ ಧಾರವಾಡ ಬಳಿಯ ಕಲಕೇರಿ ಗ್ರಾಮದಲ್ಲಿರುವ ಸಂಗೀತ ವಿದ್ಯಾಲಯದ ಕಲಾವಿದರನ್ನು ಕರೆತಂದು ಅವರಿಂದ ಚಾಲನೆ ನೀಡಿಸಲಾಗುತ್ತದೆ ಎಂಬ ಮಾತುಗಳೂ ಇವೆ. ಅಲ್ಲಿನ ಕಲಾವಿದರು ಮೂಲತಃ ಫ್ರಾನ